

ಆಗಲಾರಳು'

'ಯಾಕೆ?'

'ನಮ್ಮದು ಪ್ರೇಮ ವಿವಾಹ. ಮನೆಯವರ ವಿರೋಧ ನನಗಿತ್ತು. ಎಲ್ಲರನ್ನೂ ಬಿಟ್ಟು ಅವಳಿಗಾಗಿ ಬಂದೆ. ಪ್ರೀತಿ ಕುರುಡು ಎಂದು ಗೊತ್ತಾಗುವುದರಲ್ಲಿ ಕಾಲ ಮಿಂಚಿತ್ತು. ಅವಳಪ್ಪನದು ಹೇರಳ ಆಸ್ತಿಯಿದೆ. ಅವಳ ಬಳಗ ಎಲ್ಲಾ ಇಲ್ಲಿಯವರೇ. ನನಗೆ ಯಾರೂ ಇಲ್ಲ. ಮದುವೆಗೆ ವಿರೋಧಿಸಿದರೆಂದು ನನ್ನವರಲ್ಲಿ ಅವಳಿಗೆ ದ್ವೇಷ. ನಾನೂ ಮತ್ತೆ ಊರಿಗೆ ಹೋಗಿಲ್ಲ. ನೀವು ಸಿಕ್ಕಿರುವುದು ಸಂತೋಷವಾಗಿದೆ. ನಾನು ಬರುತ್ತಿರುತ್ತೇನೆ'.

ಆ ಗಳಿಗೆಯಲ್ಲೇ ಇವರಿಬ್ಬರಿಗೂ ಅವನಲ್ಲಿ ಅನುಕಂಪ ಮೂಡಿತ್ತು. ಮನೆಯಲ್ಲಿ ಒಂದು ಸಿಹಿ ಮಾಡಿದಲ್ಲಿ ಶಂಕರನಿಗೆ ಕರೆ ಹೋಗುತ್ತಿತ್ತು. ಬರುವಾಗಲೆಲ್ಲಾ ಮಕ್ಕಳಿಗೆ ಚಾಕಲೇಟ್ ತರುತ್ತಿದ್ದ. ವಿದ್ಯಾ ಉಪೇಕ್ಷಿಸಿದರೆ, 'ಬಿಡಿ ಅತ್ತಿಗೆ, ನನಗಂತೂ ಮಕ್ಕಳಿಲ್ಲ, ನಿಮ್ಮ ಮಕ್ಕಳಿಗೆ ಮಾವನಾಗಿ ತರುತ್ತಿದ್ದೇನೆ' ಎಂದಾಗ ಅಖಿಲಳಿಗೆ ಬಾಯಿ ಕಟ್ಟುತ್ತಿತ್ತು. ಅವನ ಸಂಸಾರ ವಿಷಯ ಕೆದಕಿ ನೋವು ಮಾಡುವುದು ಬೇಡವೆಂದು ಅಂದುಕೊಂಡಿದ್ದರು.

ಕಿಶೋರನ ಏನೇ ಕೆಲಸ ಕಾರ್ಯವಿರಲಿ ಜೊತೆಯಲ್ಲಿ ಶಂಕರ ಇರುತ್ತಿದ್ದ. ಮಗಳು ಪೃಥ್ವಿ ಎಸ್.ಎಸ್.ಎಲ್.ಸಿ ಯಲ್ಲಿ ರ್‍ಯಾಂಕ್ ಗಿಟ್ಟಿಸಿದಾಗ ಹೆಚ್ಚು ಸಂಭ್ರಮಪಟ್ಟವ ಶಂಕರ. ಬ್ಯಾಂಕ್‌ನವರಿಗೆಲ್ಲಾ ಪಾರ್ಟಿ ಇಟ್ಟ ಕಿಶೋರನಿಗೆ ಹಾಲ್ ಬುಕ್ ಮಾಡುವುದರಿಂದ ಹಿಡಿದು ಪ್ರತಿ ಕೆಲಸಕ್ಕೆ ಜೊತೆಯಾಗಿದ್ದ.

'ವಿದ್ಯಾ ನಂಗೆ ಅಣ್ಣ ಇಲ್ಲ ಎನ್ನುವುದು ನಿಮ್ಮಿಂದ ಮರೆತೆ' ಎಂದಿದ್ದಳು. ಪಾರ್ಟಿಗೆ ಅಖಿಲಳನ್ನು ನಾನೇ ಕರೆಯುವೆ ಎಂದವಳಿಗೆ, 'ಬೇಡ ಅತ್ತಿಗೆ ಏನಾದರೂ ಹೇಳಿಯಾಳು. ನಾನೇ ಹೇಳಿ ನೋಡುತ್ತೇನೆ. ಬಂದರೆ ಊರಿನವರೆಂದು ಹೇಳಬೇಡಿ' ಎಂದಿದ್ದ.

ಪಾರ್ಟಿ ಶುರುವಾಗುವ ತನಕ ಅಲ್ಲಿದ್ದು ಮನೆಗೆ ಹೋಗಿದ್ದ. ಸಮಾರಂಭದ ಮಧ್ಯದಲ್ಲಿ ಶಂಕರನೊಂದಿಗೆ ಅಖಿಲ ಬಂದ್ದಿದ್ದಳು. ಆ ಗಡಿಬಿಡಿಯಲ್ಲೂ ವಿದ್ಯಾ ಅಖಿಲಳನ್ನು ಹೋಗಿ ಮಾತಾಡಿಸಿದ್ದಳು. ಹೆಚ್ಚು ಮಾತನಾಡದಿದ್ದರೂ ಅವಳಲ್ಲಿ ಜಂಬ ದರ್ಪ ಕಾಣಿಸಿರಲಿಲ್ಲ. ಹೆಚ್ಚು ಹೊತ್ತು ನಿಲ್ಲದೆ ಅವರು ಹೊರಟಿದ್ದರು. ಶಂಕರನೂ ಅವಳಿರುವಾಗ ಅಪರಿಚಿತನಂತೆ ಗಂಭೀರವಾಗಿದ್ದ. ಹೊರಡುವಾಗ ಅಖಿಲ 'ಹೋಗಿ ಬರುವೆ' ಎಂದವಳು ವಿದ್ಯಾಳ ಫೋನ್ ನಂಬರ್ ಕೇಳಿದ್ದಳು. ಮರುದಿನ ಥ್ಯಾಂಕ್ಸ್ ಹೇಳಿ ವಾಟ್ಸ್‌ಆಪ್‌ನಲ್ಲಿ ಮೆಸೇಜ್ ಕಳಿಸಿದ್ದಳು. ಅವಳನ್ನು ಮನೆಗೆ ಬಿಟ್ಟು ಮತ್ತೆ ಬಂದ ಶಂಕರ ರಾತ್ರಿ ತನಕ ಇದ್ದು ಹೋಗಿದ್ದ.

ಮೊನ್ನೆ ಶಂಕರ ಕಿಶೋರನಿಗೆ ಫೋನ್ ಮಾಡಿದ್ದ ಮಾತಾಡುವುದಿದೆ ಸಂಜೆ ಬ್ಯಾಂಕ್ ಹತ್ತಿರ ಬರುವೆ ಎಂದಿದ್ದ.

ಶಂಕರ ಬಹಳ ಟೆನ್ಷನ್‌ನಲ್ಲಿದ್ದ. 'ನನ್ನ ಜೀವನ ಮುಗಿದಂತೆ. ಎಷ್ಟೇ ಕಷ್ಟ ಬಂದರೂ ಹೇಗೋ ಬದುಕಿದ್ದೆ. ಆದರೀಗ ಬದುಕಿದ್ದೂ ಸತ್ತಂತೆ'.

'ಏನಾಯಿತೆಂದು ಹೇಳು ಕಿಶೋರ್' ಅವನ ಹೆಗಲ ಮೇಲೆ ಕೈಯಿಟ್ಟು ಕೇಳಿದ.

'ಏನು ಹೇಳಲಿ? ನಾನು ಪೂರಾ ಮುಳುಗಿದಂತೆ. ಒಬ್ಬರಿಗೆ ಸಹಾಯ ಮಾಡಲು ಶ್ಯೂರಿಟಿ ಹಾಕಿದ್ದೆ. ಅವನು ಕೈ ಎತ್ತಿಬಿಟ್ಟ ಕಣೊ. ನನಗೆ ನೋಟಿಸ್ ಬಂದಿದೆ. ನನ್ನದಾದ ಒಂದು ಮನೆಯಿತ್ತು; ಅದು ಬಿಟ್ಟರೆ ಎಲ್ಲಾ ಅಖಿಲನದೇ. ಅದನ್ನು ಬ್ಯಾಂಕ್ ಸ್ವಾಧೀನಪಡಿಸಿಕೊಳ್ಳುತ್ತೆ. ಅಖಿಲನಿಗೇನಾದರೂ ತಿಳಿಯಿತೆಂದರೆ ಅವಳ ಇಡೀ ಪರಿವಾರ ತಿರುಗಿ ಬೀಳುತ್ತದೆ. ನಿನ್ನ ಬಿಟ್ಟರೆ ನನ್ನವರಂತ ಯಾರೂ ಇಲ್ಲ ಕಿಶೋರ್. ನೀನು ಹಣ ಕೊಟ್ಟರೆ ಮನೆ ಉಳಿಯುತ್ತೆ. ನಾನು ಮಾರಿದರೆ ಹೆಚ್ಚು ಬೆಲೆ ಬರುತ್ತೆ. ನಿನ್ನದು ಕೊಟ್ಟರೂ ನನ್ನ ಕೈಯಲ್ಲಿ ಹಣ ಉಳಿಯುತ್ತೆ' ಎಂದ.

ಮೈ ಜುಂ ಎಂದಿತು. ಆ ಗಳಿಗೆಯಲ್ಲಿ ಗೆಳೆಯನ ಜೀವದ ಉಳಿವು ಅಳಿವು ನನ್ನದಾಗಿದೆ ಎನಿಸಿತು. ಅಣ್ಣನೆಂದೇ ತಿಳಿದಿದ್ದ ಅಖಿಲ ವಿರೋಧಿಸಲಾರಳೆಂದು 'ಹೆದರಬೇಡ ನಾನಿದ್ದೇನಲ್ಲಾ ಏನಾದರೂ ಮಾಡುವ' ಎಂದ. ಶಂಕರ ಅವನ ಕೈಹಿಡಿದು ನೀನು ನನ್ನ ಪಾಲಿಗೆ